# ಕರ್ನಾಟಕ ಸರ್ಕಾರದ ನಡವಳಿಗಳು

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಿಷಯ: ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಶಿರಗಾಂವ್ ಗ್ರಾಮದ ಬಸವಣ್ಣ ಕೆರೆಗೆ ದೂಧಗಂಗಾ ನದಿಯಿಂದ ಹಾಗು ಕಾಡಾಪೂರ ಗ್ರಾಮದ ಕೆರೆಗೆ ಕೃಷ್ಣಾ ನದಿಯಿಂದ ನೀರು ತುಂಬಿಸುವ ಬಗ್ಗೆ

******

ಓದಲಾಗಿದೆ:

ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ, ಇವರ ಪತ್ರಸಂಖ್ಯೆ:ಮು.ಇಂ/ಸನೀ(ಉ)ವಲಯ/ಬಿಜೆಪಿ/ಎಇ-1/2011-12/1382 ದಿನಾಂಕ: 13.03.2012.

**ಪ್ರಸ್ತಾವನೆ:**

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಕೆಳಕಂಡ ಕೆರೆಗಳು ಮಳೆ ನೀರಿನಿಂದ ಪೂರ್ಣವಾಗಿ ತುಂಬದೇ ಇರುವುದರಿಂದ ಈ ಕೆರೆಗಳಿಗೆ ಅನುಕ್ರಮವಾಗಿ ದೂಧಗಂಗಾ ಮತ್ತು ಕೃಷ್ಣಾ ನದಿಗಳಿಂದ ನೀರನ್ನು ತುಂಬಿಸುವ ಪ್ರಸ್ತವನೆಯನ್ನು ಜಲ ಸಂಪನ್ಮೂಲ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ನೀರಾವರಿ ನಿಗಮದ ಪರಿಶೀಲನೆಯಲ್ಲಿರುತ್ತದೆ.

| ಕ್ರ ಸಂ | ಕೆರೆಯ ಹೆಸರು | ಕಣಿವೆ (ಸರಣಿ) | ನಿರ್ಮಾಣದ ವರ್ಷ | ನೀರಿನ ಸಂಗ್ರಹಣಾ ಸಾಮರ್ಥ್ಯ (ಎಂಸಿಎಫ್‌ಟಿ) |
|---|---|---|---|---|
| 01 | ಚಿಕ್ಕೋಡಿ ತಾಲ್ಲೂಕಿನ ಶಿರಗಾಂವ ಗ್ರಾಮದ ಬಸವಣ್ಣ ಕೆರೆ | ಕೃಷ್ಣಾ/ದೂಧಗಂಗಾ ಕೆ-1 | 1966 | 6.00 |
| 02 | ಚಿಕ್ಕೋಡಿ ತಾಲ್ಲೂಕಿನ ಕಾಡಾಪೂರ ಗ್ರಾಮದ ಕೆರೆ | ಕೃಷ್ಣಾ/ಕೃಷ್ಣಾ ಕೆ-2 | 1966 | 11.70 |

ಈ ಕೆರೆಗಳಲ್ಲಿ ಬಳಕೆ ಮಾಡಲು ಉದ್ದೇಶಿಸಿದ್ದ ನೀರಿನ ಪರಿಮಾಣವನ್ನು ಈ ಹಿಂದೆ ಸ್ಕೀಂ-ಎ ಅಡಿ ನೀಡಲಾಗಿರುವ ನೀರಿನ ಹಂಚಿಕೆಯಲ್ಲಿ ಪರಿಗಣಿಸಲಾಗಿರುತ್ತದೆ. ಮುಂದುವರೆದು, ಪ್ರಸ್ತುತ ಕೆರೆಗಳಿಗೆ ತುಂಬಿಸಲು ಅವಶ್ಯವಿರುವ ನೀರಿನ ಪರಿಮಾಣವನ್ನು ಸಣ್ಣ ನೀರಾವರಿ ಯೋಜನೆಗಳಿಗೆ ನೀಡಿರುವ ನೀರಿನ ಹಂಚಿಕೆಯ ಪರಿಮಾಣದಲ್ಲಿ ಲಭ್ಯವಾಗುವ ಉಳಿತಾಯದಿಂದ ಭರಿಸಬಹುದಾಗಿದೆ. ಕಾರಣ, ಕೆರೆಗಳಿಗೆ ಅವಶ್ಯವಿರುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ನೀರನ್ನು ತುಂಬಿಸುವ ಯೋಜನೆಯನ್ನು ಕೈಗೊಳ್ಳಲು ಜಲ ಸಂಪನ್ಮೂಲ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಈ ಎರಡು ಕೆರೆಗಳನ್ನು ಹಸ್ತಾಂತರಿಸಲು ಪರಿಗಣಿಸಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಸನೀಇ 07 ಏನೀಯೋ 2012,**

**ಬೆಂಗಳೂರು, ದಿನಾಂಕ 28 ನೇ ಮಾರ್ಚ್ 2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಶಿರಗಾಂವ ಗ್ರಾಮದ ಬಸವಣ್ಣ ಕೆರೆ ಹಾಗು ಕಾಡಾಪೂರ ಗ್ರಾಮದ ಕೆರೆಗಳನ್ನು ಅನುಕ್ರಮವಾಗಿ ದೂಧಗಂಗಾ ಹಾಗು ಕೃಷ್ಣಾ ನದಿಗಳಿಂದ ನೀರು ತುಂಬಿಸುವ ಯೋಜನೆ ಕೈಗೊಳ್ಳಲು ಜಲ ಸಂಪನ್ಮೂಲ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ನೀರಾವರಿ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

28/3/2012

(ರುದ್ರಮೂರ್ತಿ)
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು ಕರ್ನಾಟಕ ಬೆಂಗಳೂರು.
2) ಮಹಾಲೇಖಪಾಲರು, ಲೆಕ್ಕಪತ್ರ-1 ಮತ್ತು ಲೆಕ್ಕಪತ್ರ-2, ಕರ್ನಾಟಕ, ಬೆಂಗಳೂರು.
3) ಮಹಾಲೇಖಪಾಲರು, ಲೆಕ್ಕಪರಿಶೋಧನೆ-1 ಮತ್ತು ಲೆಕ್ಕಪರಿಶೋಧನೆ-2, ಕರ್ನಾಟಕ, ಬೆಂಗಳೂರು.
4) ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
6) ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ.
7) ಅಧೀಕ್ಷಕ ಅಭಿಯಂತರರು, ಸಣ್ಣ ನೀರಾವರಿ ವೃತ್ತ ಬೆಳಗಾವಿ.
8) ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ ಬೆಳಗಾವಿ.
9) ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
10) ವಾರದ ರಾಜ್ಯಪತ್ರ.
11) ಶಾಖಾ ರಕ್ಷಿತ ಕಡತ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಸಂ.
30 MAR 2012
ಬೆಂಗಳೂರು - 560001.

ಪ್ರಕಾಶ್ ಬಾ.ಹುಕ್ಕೇರಿ (ಮಾಜಿ ಸಚಿವರು)
ಶಾಸಕರು, ಚಿಕ್ಕೋಡಿ-ಸದಲಗ

ಎಕ್ಸಂಬಾ,
ಚಿಕ್ಕೋಡಿ ತಾ.,
ಬೆಳಗಾವಿ ಜಿಲ್ಲೆ,
08338 276344
9972003290

ದಿನಾಂಕ : 14-03-2012

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನೀರಾವರಿ ನಿಗಮ ನಿಯಮಿತ.,
ಕಾಫಿ ಬೋರ್ಡ್ ಕಟ್ಟಡ,
ಬೆಂಗಳೂರು.

ಮಾನ್ಯರೆ,

ವಿಷಯ: ಬೆಳಗಾವಿ ಜಿಲ್ಲೆ, ಚಿಕ್ಕೋಡಿ-ಸದಲಗ ಕ್ಷೇತ್ರ ವ್ಯಾಪ್ತಿಯ ಕಾಮಗಾರಿಗಳಿಗೆ 2012-13ರ ಆಯವ್ಯಯದಲ್ಲಿ ಅನುದಾನವನ್ನು ಒದಗಿಸುವ ಬಗ್ಗೆ

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಜಸಂಇ 74 ಎಂಬಿಐ 2011 ದಿನಾಂಕ:12-3-2012

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಳಗಾವಿ ಜಿಲ್ಲೆ, ನನ್ನ ಮತಕ್ಷೇತ್ರವಾದ ಚಿಕ್ಕೋಡಿ-ಸದಲಗ ವ್ಯಾಪ್ತಿಯ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಮಹತ್ವದ್ದಾಗಿದ್ದು, ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು 2012-13ರ ಕನೀನಿ ನಿಗಮದ ಆಯವ್ಯಯದಲ್ಲಿ ಅನುದಾನವನ್ನು ಅಳವಡಿಸಿಕೊಳ್ಳುವಂತೆ ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಆದೇಶಿಸಬೇಕೆಂದು ಕೋರುತ್ತೇನೆ. ಈ ಸಂಬಂಧ ಉಲ್ಲೇಖಿತ ಪತ್ರದಲ್ಲಿ ಸರ್ಕಾರವು ನಿಗಮಕ್ಕೆ ಬರೆದ ಪತ್ರದ ಪ್ರತಿ ಲಗತ್ತಿಸಿದೆ.

| ಕ್ರ ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ.ಕೋಟಿಗಳಲ್ಲಿ | 2012-13ನೇ ಸಾಲಿಗೆ ಬೇಕಾಗುವ ಅನುದಾನ (ರೂ.ಕೋಟಿಗಳಲ್ಲಿ) |
|---|---|---|---|
| 01 | ಕಲ್ಲೋಳ-ಯಡೂರು ಮಧ್ಯೆ ಕೃಷ್ಣಾ ನದಿಗೆ ಅಡ್ಡಲಾಗಿ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಾಣ | 21.00 | 10.00 |
| 02 | ಶಿರಗಾಂವ-ಬಸವಣ್ಣ ಕೆರೆಗೆ ದೂಧಗಂಗಾ ನದಿಯಿಂದ ನೀರನ್ನು ತುಂಬಿಸುವ ಕಾಮಗಾರಿ | 3.50 | 1.50 |
| 03 | ಮಲಿಕವಾಡ ಏತ ನೀರಾವರಿ ಯೋಜನೆ | 1.50 | 1.50 |
| 04 | ಚಿಕ್ಕೋಡಿ ತಾಲ್ಲೂಕಿನ ಕಾಡಾಪುರ ಗ್ರಾಮದಲ್ಲಿನ ಕೆರೆಗೆ ಕೃಷ್ಣಾ ನದಿಯಿಂದ ನೀರು ತುಂಬಿಸುವುದು | 5.00 | 2.00 |
| | ಒಟ್ಟು | 31.00 | 15.00 |

ಆದರದೊಡನೆ,

ತಮ್ಮ ವಿಶ್ವಾಸಿ,

(ಪ್ರಕಾಶ್ ಬಾ.ಹುಕ್ಕೇರಿ)